CC 119/2016
CW- 3 PW -4

**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**ಸಿ.ಸಿ ನಂ. 119/2016**

ದಿನಾಂಕಃ**. 22.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**3** | ಪ್ರಾಸಾ-**4** |
|---|---|
| ಹೆಸರು | - ಎಂ.ಎನ್. ರವಿ ಕುಮಾರ್ |
| ತಂದೆ ಹೆಸರು | - ನಂಜುಂಡಸ್ವಾಮಿ |
| ವಯಸ್ಸು | - **48** |
| ಉದ್ಯೋಗ | - ಮುಖ್ಯ ಪೇದೆ, ಹಾರೋಹಳ್ಳಿ ಪೋ . ಠಾಣೆ |
| ವಿಳಾಸ | - ಹಾರೋಹಳ್ಳಿ |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ನಾನು **2013** ರಿಂದ **2015** ರವರೆಗೆ ಸಾತನೂರು ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಮತ್ತು ಚಾಲಕನಾಗಿ ಕೆಲಸ ಮಾಡಿದ್ದೇನೆ.

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಪರಿಚಯ.

ದಿನಾಂಕಃ **16.12.2013** ರಂದು ಮದ್ಯ ರಾತ್ರಿ **1.30** ವೇಳೆ ಸಮಯದಲ್ಲಿ ನಾನು ಜೀಪ್ ಚಾಲಕನಾಗಿ ನನ್ನ ಮೇಲಾಧಿಕಾರಿ ಚಾ.ಸಾ. **1** ಮತ್ತು **2** ರಾವರೊಂದಿಗೆ ಗಸ್ತು ಕರ್ತವ್ಯ ದಲ್ಲಿದ್ದಾಗ , ಗಸ್ತು ಕರ್ತವ್ಯವನ್ನು ಮಾಡುತ್ತಾ ಸೂರನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ ಬಳಿ ಬಂದಾಗ ಆರೋಪಿತರು ಒಂದು ವಾಹನದಲ್ಲಿ ಬಂದರು. ಆಗ ಚಾ.ಸಾ. **1** ರವರು ಅನುಮಾನ ಬಂದು ಆರೋಪಿತರನ್ನು ಹಿಡಿದುಕೊಳ್ಳಲು ನನಗೆ ಹೇಳಿದಾಗ ನಾನು ಮತ್ತು ಚಾ.ಸಾ. **1** ಮತ್ತು **2** ರವರು ಹೋಗಿ ಆರೋಪಿತರನ್ನು ಹಿಡಿದುಕೊಂಡೆವು. ನಂತರ ಚಾ.ಸಾ. **1** ರವರು ನಮ್ಮೊಂದಿಗೆ ಆರೋಪಿತರನ್ನು ಕರೆದುಕೊಂಡು ಠಾಣೆಗೆ ಹೋದರು. ಆರೋಪಿತರ ಬಳಿ **2** ನಾಡ ಬಂದೂಕು ಇತ್ತು. ಆರೋಪಿತರ ಪೈಕಿ ಬಾಚಹಳ್ಳಿ ಗ್ರಾಮದ ಗೋಪಾಲ್ ಎಂಬುವನು ನಾಡಬಂದೂಕನ್ನು ಬಿಸಾಕಿ ಹೋದ.

ನಾನು ಆರೋಪಿತರ ದ್ವಿ ಚಕ್ರ ವಾಹನದ ಸಂಖ್ಯೆ ಕೆ ಎ **41** ಡಬ್ಲ್ಯೂ **.7133** ವಾಹನವನ್ನು ಹಿಡಿದುಕೊಂಡೆ.

ಸ್ಥಳದಲ್ಲಿ ಚಾ.ಸಾ. **1** ರವರು ನನ್ನ ಹಾಗೂ ಚಾ.ಸಾ. **4** ರಿಂದ **6** ರವರ ಸಮಕ್ಷಮ ಪಂಚನಾಮೆ ಮಾಡಿ ಸದರಿ ನಾಡ ಬಂದೂಕುಗಳನ್ನು ಮತ್ತು ವಾಹನವನ್ನು ಜಪ್ತು ಪಡಿಸಿಕೊಂಡರು. ಸಾಕ್ಷಿ ಒಂದು ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪಂಚನಾಮೆ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-**1(**ಡಿ**)** ಎಂದು ಗುರುತಿಸಲಾಯಿತು. ಜಪ್ಪು ಪಡಿಸಿಕೊಂಡ ನಾಡಬಂದೂಕನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ **2** ನಾಡಬಂದೂಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಓ **1** ಮತ್ತು **2** ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಅವರು ಇಂದು ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಜಪ್ತು ಪಡಿಸಿಕೊಂಡ ವಾಹನವನ್ನು ನೋಡಿದರೆ ಗುರುತಿಸಬಲ್ಲೆ.

ಈ ಬಗ್ಗೆ ನಾನು ಚಾ.ಸಾ. **1** ರವರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಪಿ.ಎಸ್.ಆರ್. ವಕೀಲರಿಂದಃ**

ರಾತ್ರಿ 8 ಗಂಟೆಗೆ ಠಾಣೆಯಲ್ಲಿ ರೋಲ್ ಕಾಲ್ ಆಗುತ್ತದೆ. ನಾನು ಚಾಲಕನಾಗಿರುವುದರಿಂದ ರೋಲ್ ಕಾಲ್ ಗೂ ನನಗೂ ಸಂಬಂಧ ಇರುವುದಿಲ್ಲ. ರಾತ್ರಿ 11 ಗಂಟೆ ಗಸ್ತು ಕರ್ತವ್ಯವನ್ನು ಪ್ರಾರಂಭಿಸಿ ರಾಮ ಮಂದಿರು ವೃತ್ತ ಮತ್ತು ಸುತ್ತಮುತ್ತಲೂ ಪ್ರದೇಶದಲ್ಲಿ ಗಸ್ತು ಕರ್ತವ್ಯ ಮಾಡಿದೆವು. ರಾಮ ಮಂದಿರ ವೃತ್ತಕ್ಕೆ ಹೋದಾಗ ಸಮಯ 11 -20 ಗಂಟೆ. ರಾಮ ಮಂದಿರ ವೃತ್ತದಲ್ಲಿ ಸುಮಾರು 15 ನಿಮಿಷ ಇದ್ದೆವು. 11 ವರೆವರೆವಿಗೂ ರಾಮಮಂದಿರ ವೃತ್ತದ ಬಳಿ ಇದ್ದು ನಂತರ ದೂಂತೂರು ರಸ್ತೆಗೆ ಹೋದಾಗ ಸಮಯ 12.15 ಗಂಟೆ. ಅಲ್ಲಿಂದಂ ಮೈಸೂರು ರಸ್ತೆಗೆ ಹೋದಾಗ ಸಮಯ 12.45 ಗಂಟೆ ಆಗಿತ್ತು. ಮೈಸೂರು

ರಸ್ತೆಯಲ್ಲಿ ಹೊನ್ನಿಗಾನಹಳ್ಳಿ ಗ್ರಾಮದ ಗಡಿವರೆವಿಗೂ ಹೋಗಿದ್ದೆವು. ಅಲ್ಲಿಂದ ಸಂತೆ ಮಾಳ ವೃತ್ತಕ್ಕೆ ಬಂದೆವು. ಆಗ ಸಮಯ ಮದ್ಯ ರಾತ್ರಿ 1 ಗಂಟೆ ಆಗಿತ್ತು. ನಾನು ಚಾ.ಸಾ. 1 ಮತ್ತು 2 ರವರು ಗಸ್ತು ಕರ್ತವ್ಯದ ಮೇಲೆ ಇದ್ದೆವು. ರಾತ್ರಿ 1 ಗಂಟೆ ನಂತರ ಕಬ್ಬಾಳು ಗ್ರಾಮದ ಕಡೆಗೆ ಹೋದೆವು.

ಆರೋಪಿತರು ಸೂರನಹಳ್ಳಿ ಗ್ರಾಮದ ಕಡೆಯಿಂದ ಕಬ್ಬಾಳು ಗ್ರಾಮದ ಕಡೆಗೆ ಹೋಗುತ್ತಿದ್ದರು. ಹೊಸ ಕಬ್ಬಾಳು ಗ್ರಾಮಕ್ಕೆ ಹೋದಾಗ ಸಮಯ ಮದ್ಯ ರಾತ್ರಿ 1.30 ಗಂಟೆ ಆಗಿತ್ತು.

ನಾವು ಹೊಸ ಕಬ್ಬಾಳು ಗ್ರಾಮಕ್ಕೆ ಹೋಗುವ ಮೊದಲು ಚಾ.ಸಾ. 4 ರಿಂದ 6 ರವರು ಸ್ಥಳದಲ್ಲಿ ಇರಲಿಲ್ಲ, ನಾನು ಗೋಪಾಲ್ ಎಂಬ ಆರೋಪಿಯನ್ನು ಹಿಡಿದುಕೊಂಡೆ. ಈ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ.

ಚಾ.ಸಾ. 4 ರಿಂದ 6 ರವರನ್ನು ಯಾರು ಕರೆಸಿದರು ಎಂದು ನನಗೆ ಈಗ ನೆನಪಿಲ್ಲ. ಯಾರು ಅವರನ್ನು ಕರೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಎಂ.ಓ 1 ಮತ್ತು 2 ಅನ್ನು ಗುರುತಿಸಲು ನಾನು ಯಾವುದೇ ನಿಖರವಾದ ಗುರತನ್ನು ಇಟ್ಟುಕೊಂಡಿರುವುದಿಲ್ಲ. ಸ್ಥಳದಲ್ಲಿ ಎಂ.ಓ 1 ಮತ್ತು 2 ಬಂದೂಕುಗಳನ್ನು ಅಳತೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಎಂ.ಓ 1 ಮತ್ತು 2 ಬಂದೂಕಿನ ಮೇಲೆ ಏನು ನಿಶಾನೆ ಇತ್ತು ಎಂದು ನನಗೆ ಗೊತ್ತಿಲ್ಲ. ನಿ.ಪಿ.2 ಪಂಚನಾಮೆಯನ್ನು ಚಾ.ಸಾ. 1 ರವರು ಘಟನಾ ಸ್ಥಳದಲ್ಲಿ ಬರೆದರು.

ಘಟನಾ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ಆರೋಪಿತರು ದ್ವಿ ಚಕ್ರ ವಾಹನದಲ್ಲಿ ಘಟನಾ ದಿನದಂದು ಯಾವುದೇ ಬಂದೂಕುಗಳೊಂದಿಗೆ ಹೋಗುತ್ತಿರಲಿಲ್ಲ ಮತ್ತು ಅವುಗಳನ್ನು ನಾವು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿರುವುದಿಲ್ಲ ಮತ್ತು ಚಾ.ಸಾ. 4 ರಿಂದ 6 ರವರು ಸ್ಥಳದಲ್ಲಿ ಹಾಜರಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಪಂಚನಾಮೆಯನ್ನು ಸೃಷ್ಟ

ಮಾಡಿದ್ದು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ನನ್ನ ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**